ನೇಮಕಾತಿಯ ನೌಕರರಲ್ಲದಿರುವುದರಿಂದ ಇವರ ಕುಟುಂಬಗಳಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆದಾಗ್ಯೂ ಮಾನವೀಯತೆ ದೃಷ್ಟಿಯಿಂದ ಮೇಲ್ಕಂಡಂತೆ ಪರಿಹಾರವನ್ನು ನೀಡಲಾಗಿದೆ.

ಇ) ಮೇಲೆ ತಿಳಿಸಿರುವಂತೆ ಅನುಕಂಪದ ಆಧಾರದ ಮೇಲೆ ನೇಮಕಾತಿ ನೀಡಲು ಅವಕಾಶ ಇಲ್ಲದಿರುವುದರಿಂದ ಮೃತ ಕಾರ್ಮಿಕರಿಗೆ ಪರಿಹಾರ ಧನವನ್ನು ಈಗಾಗಲೇ ಮೇಲ್ಕಂಡಂತೆ (ಅ) ನಲ್ಲಿ ತೋರಿಸಿರುವಂತೆ ನೀಡಿದೆ.

2253 (2669) ಶ್ರೀ ಅಪ್ಪಸಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ (ಬಿಜಾಪುರ):– ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಶಾಲಾ–ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಬಸ್‌ಪಾಸ್ ನೀಡುವಾಗ ಅನುಸರಿಸುವ ಮಾನದಂಡಗಳೇನು;

ಆ) ಯಾವ ಯಾವ ಬಗೆಯ ಬಸ್‌ಪಾಸ್‌ಗಳನ್ನು ವಿತರಿಸಲಾಗುತ್ತಿದೆ (ವಿವರ ನೀಡುವುದು);

ಇ) ಬಿಜಾಪುರ ಜಿಲ್ಲೆಯಲ್ಲಿ ಕ.ರಾ.ರ.ಸಾ.ಸಂಸ್ಥೆಯ ಕೆಲವು ಬಸ್‌ಗಳಲ್ಲಿ ನಿರ್ವಾಹಕರು ಬಸ್‌ಪಾಸ್ ಇರುವ ವಿದ್ಯಾರ್ಥಿಗಳನ್ನು ಪ್ರಯಾಣಿಸಲು ನಿರಾಕರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ನಿರಾಕರಿಸಲು ಕಾರಣಗಳೇನು;

ಉ) ವಿದ್ಯಾರ್ಥಿಗಳಿಗೆ ಆಗುತ್ತಿರುವ ಅನಾನುಕೂಲಗಳನ್ನು ತಪ್ಪಿಸಲು ಸರ್ಕಾರ ಕೈಗೊಂಡಿರುವ ಮತ್ತು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) 1. ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ವಿದ್ಯಾಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ 25 ವರ್ಷದೊಳಗಿನ ವಿದ್ಯಾರ್ಥಿಗಳಿಗೆ ಅವರ ವಾಸ ಸ್ಥಳದಿಂದ 40 ಕಿ.ಮೀ. ದೂರದವರೆಗೆ ರಿಯಾಯಿತಿ ಪಾಸನ್ನು ವಿತರಿಸಲಾಗುತ್ತಿದೆ.

2. ರಿಯಾಯಿತಿ ಬಸ್ ಪಾಸ್ ಪಡೆಯುವ ವಿದ್ಯಾರ್ಥಿಯು ಶಾಲೆ/ಕಾಲೇಜುಗಳ ಮುಖ್ಯಸ್ಥರಿಂದ ಪಡೆದ ದೃಢೀಕರಣ ಪತ್ರ ಹಾಗೂ ಮೂರು ಭಾವಚಿತ್ರಗಳೊಂದಿಗೆ ನಿಗಧಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಿ ಪಾಸ್ ಪಡೆಯಬಹುದಾಗಿದೆ.

ಆ) 1. ಪ್ರಾಥಮಿಕ ಶಾಲೆ, ಹೈಸ್ಕೂಲ್, ಕಾಲೇಜ್, ಐಟಿಐ/ಡಿಪ್ಲೋಮಾ, ವೃತ್ತಿಪರ ತರಬೇತಿ, ಸಂಜೆ ಕಾಲೇಜು ವಿದ್ಯಾರ್ಥಿಗಳಿಗೆ ಬಸ್‌ಪಾಸ್ ನೀಡಲಾಗುತ್ತಿದೆ.

2. ಸಾರ್ವಜನಿಕರಿಗೆ ರಿಯಾಯಿತಿ ದರದಲ್ಲಿ ಮಾಸಿಕ ಪಾಸುಗಳನ್ನು, ನಗರ ಹಾಗೂ ಉಪ ನಗರ ಮತ್ತು 7 ದಿನಗಳ ಫ್ರೀಡಮ್ ಪಾಸುಗಳನ್ನು ವಿತರಿಸಲಾಗುತ್ತಿದೆ.

3. ಅಂಧರಿಗೆ, ಸ್ವಾತಂತ್ರ್ಯ ಹೋರಾಟಗಾರರಿಗೆ, ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷರಿಗೆ, ರಾಜ್ಯಾಧ್ಯಕ್ಷರಿಗೆ, ಅರ್ಜುನ ಪ್ರಶಸ್ತಿ ವಿಜೇತ ಕ್ರೀಡಾಪಟುಗಳಿಗೆ, ಸಂಗೀತ ನಾಟಕ, ಯಕ್ಷಗಾನ ಕಲಾವಿದರಿಗೆ ಉಚಿತ ಬಸ್‌ಪಾಸ್ ವಿತರಿಸಲಾಗುತ್ತಿದೆ.

4. ಅಂಗವಿಕಲರಿಗೆ ತಮ್ಮ ವಾಸಸ್ಥಳದಿಂದ 100 ಕಿ.ಮೀ.ವರೆಗೆ ರೂ. 250/– ಪಡೆದು ರಿಯಾಯಿತಿ ದರದಲ್ಲಿ ಪಾಸನ್ನು ವಿತರಿಸಲಾಗುತ್ತಿದೆ.

ಇ) ಇಲ್ಲ

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

2254 (2670) ಶ್ರೀ ಅಪ್ಪಸಹೇಬ್ (ಬಿಜಾಪುರ):– ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಳವಾಡ ಏತ ನೀರಾವರಿಗಾಗಿ 'ಎ' ಮತ್ತು 'ಬಿ' ಯೋಜನೆಯಡಿ ಸರ್ಕಾರ ಕೈಗೊಂಡ ಕಾಮಗಾರಿಗಳು ಯಾವುವು;

ಆ) ಈ ಯೋಜನೆಯಿಂದ ನೀರಾವರಿಗೊಳಪಡುವ ಪ್ರದೇಶಗಳು ಯಾವುವು (ಎಕರೆವಾರು ವಿವರ ನೀಡುವುದು);

ಇ) ಈ ಯೋಜನೆಯಡಿ ಬಿಜಾಪುರ ಜಿಲ್ಲೆಗೆ ಎಷ್ಟು ಟಿ.ಎಂ.ಸಿ. ನೀರನ್ನು ನಿಗದಿಗೊಳಿಸಲಾಗಿದೆ;

ಈ) ಈ ಕಾಮಗಾರಿಗಳು ಪ್ರಸಕ್ತ ಸಾಲಿನಲ್ಲಿ ಯಾವ ಹಂತದಲ್ಲಿವೆ;

ಉ) ಈ ಕಾಮಗಾರಿಗಳು ಮುಗಿಯಲು ಇನ್ನೂ ಎಷ್ಟು ಸಮಯ ಬೇಕಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಮುಳವಾಡ ಏತ ನೀರಾವರಿ ಯೋಜನೆಯ ಸ್ಕೀಂ–'ಎ' ಕಾಮಗಾರಿಗಳನ್ನು ಮಾತ್ರ ಕೈಗೆತ್ತಿಕೊಳ್ಳಲಾಗಿದೆ.

ಆ) ಈ ಯೋಜನೆಯಡಿಯಲ್ಲಿ ನೀರಾವರಿಗೆ ಒಳಪಡುವ ಪ್ರದೇಶದ ವಿವರಗಳು ಈ ಕೆಳಗಿನಂತಿವೆ:

ಬಿಜಾಪುರ ಜಿಲ್ಲೆ:

1.	ಬಿಜಾಪುರ ತಾಲ್ಲೂಕು	20,575 ಎಕರೆ (8,330 ಹೆಕ್ಟೇರ್)
2.	ಬಸವನ ಬಾಗೇವಾಡಿ ತಾಲ್ಲೂಕು	41,150 ಎಕರೆ (16,660 ಹೆಕ್ಟೇರ್)